**ಓ ಎಸ್ 24/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 06.06.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಕೆ ಎಂ ಆರ್ ವಕೀಲರಿಂದಃ**

ಜಮೀನು ಪೋಡು ಕುರಿತಂತೆ ಸಮಸ್ಯೆ ಇದೆ ಎಂಬ ವಿಷಯ ನಿಶಾನೆ ಪಿ 1 ರಲ್ಲಿನ ಕ್ರಯದ ಕರಾರು ಪತ್ರ ಆದ ನಂತರ ಗೊತ್ತಾಯಿತು. ಜಮೀನಿನ ಪೋಡು ಕುರಿತಂತೆ ಸಮಸ್ಯೆ ಇದೆ ಎಂಬ ಸಂಗತಿಯನ್ನು 2 ನೇ ಕರಾರು ಪತ್ರದಲ್ಲಿ ನಮೂದು ಮಾಡಿಲ್ಲ. ಸಾಕ್ಷಿ ಮುಂದುವರಿದು ಕ್ರಯಪತ್ರವನ್ನು ಬೇಗ ಬರೆದುಕೊಡುವುದಾಗಿ ಹೇಳಿದ ಕಾರಣ ಪೋಡಿನ ಸಮಸ್ಯೆಯನ್ನು ಕರಾರು ಪತ್ರದಲ್ಲಿ ನಮೂದು ಮಾಡಿಸಲಿಲ್ಲ ಎಂದು ಹೇಳುತ್ತಾರೆ. ಈ ಸಂಗತಿಯನ್ನು ಕ್ರಯದ ಪೂರಕ ಕರಾರು ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ. ನಾನು ಸ್ಟೆನೋಗ್ರಾಫರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಸ್ಟೆನೋಗ್ರಾಫರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಕಾರಣ ಈ ಸಂಗತಿಯನ್ನು ಕರಾರು ಪತ್ರದಲ್ಲಿ ನಮೂದು ಮಾಡಿಸಬೇಕು ಎಂಬ ಅರಿವು ಇತ್ತು ಎಂದರೆ ಸರಿ, ಆದರೆ ದಾಖಲೆಗಳನ್ನು ಸಿದ್ದಪಡಿಸಲು ಕಾಲಾವಕಾಶ ಬೇಕಾಗಿದೆ ಎಂದು ಗೋಪಾಲಸ್ವಾಮಿರವರೇ ಸಮಯ ತೆಗೆದುಕೊಂಡರು ಎಂದು ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿದ್ದಾರೆ. ನಾನು ಸರ್ಕಾರಿ ನೌಕರಳು ಎಂದರೆ ಸರಿ. ನಿಶಾನೆ ಪಿ 1 ಮತ್ತು 2 ನ್ನು ಬರೆಸಿಕೊಳ್ಳುವ ಮೊದಲು ನಾನು ಸರ್ಕಾರ್ರದಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂದರೆ ಸರಿ, ಆದರೆ ಅವರು ದಾಖಲೆಗಳನ್ನು ಕೊಟ್ಟ ನಂತರ ನಾನು ಕಚೇರಿಯಲ್ಲಿ ಅವುಗಳನ್ನು ಸಲ್ಲಿಸಿ ಆನಂತರ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ನಿ ಪಿ 1 ಮತ್ತು 2 ನ್ನು ಬರೆಸಿಕೊಳ್ಳುವ ಕಾಲಕ್ಕೆ ನನಗೆ ದಾಖಲೆಗಳು ಸಿಗದೆ ಇದ್ದ ಕಾರಣ ನಾನು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆದುಕೊಂಡಿರಲಿಲ್ಲ. ನಾನು ಸರ್ಕಾರಿ ನೌಕರಳಾಗಿರುವ ಕಾರಣ ನಿಶಾನೆ ಪಿ 1 ಮತ್ತು 2 ನ್ನು ಕಾನೂನು ಬಾಹಿರವಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ, ಕ್ರಯಪತ್ರ ಮಾಡಿಸಿಕೊಳ್ಳುವುದಕ್ಕಿಂತ ಮೊದಲು ಎಲ್ಲಾ ದಾಖಲೆಗಳನ್ನು ಸಲ್ಲಿಸಿ ಅನುಮತಿ

ಪಡೆದುಕೊಳ್ಳಬೇಕಾತ್ತದೆ. ಯಾವುದೇ ಸ್ವತ್ತನ್ನು ಕ್ರಯಕ್ಕೆ ಪಡೆಯಬೇಕಾದರೆ ಕ್ರಯದ ಕರಾರು ಮಾಡಿಕೊಳ್ಳುವಾಗಲೂ ಸರ್ಕಾರದ ಪೂರ್ವಾನುಮತಿ ಪಡೆದುಕೊಳ್ಳಬೇಕು ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ಸಾಲ ಪಡೆದಿರುವುದಕ್ಕೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆಯೇ ಹೊರತು ಪೋಡಿನ ಸಮಸ್ಯೆ ಬಗ್ಗೆ ದಾಖಲೆಗಳನ್ನು ನಾವೇ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪೋಡಿನ ಬಗ್ಗೆ ಸಮಸ್ಯೆ ಇದೆ ಎಂಬ ಸಂಗತಿ ನನಗೆ ಮೊದಲೇ ಅರಿವಿದ್ದ ಕಾರಣ ನಿಶಾನೆ ಪಿ 9 ರಿಂದ 16 ರವರೆಗಿನ ದಾಖಲೆಗಳನ್ನು ಹಾಜರುಪಡಿಸುವಾಗಲೇ ಉಳಿದ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಸಾಲಕ್ಕಾಗಿ ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದ ಕಾರಣ ನಿಶಾನೆ ಪಿ 9 ರಿಂದ 16 ನ್ನು ಮೊದಲು ಕಣ್ ತಪ್ಪಿನಿಂದ ಹಾಜರುಪಡಿಸಿಲ್ಲ ಎಂದು ಹೇಳಿ ಈಗ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಕಾನೂನು ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರಳಾಗಿರುವ ಕಾರಣ ಪೂರ್ವಾನುಮತಿ ಪಡೆಯದೆ ಕ್ರಯದ ಕರಾರು ಸೃಷ್ಟಿ ಮಾಡಿರುವ ಕಾರಣ ದಾವೆಯಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರು 4 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**